ಸಿಸಿ ನಂಃ 170/2025
ಸಿ.ಡಬ್ಲೂ 10/ಪಿ.ಡಬ್ಲೂ 4

**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 170/2025**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಶಿವಾನಂದ ಹುಲಿಗೆಪ್ಪನವರ |
| ತಂದೆಯ ಹೆಸರು | ಃ | ಸುರೇಶ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಚಾಲಕ |
| ವಾಸ ಸ್ಥಳ | ಃ | ಧಾರವಾಡ. |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **07-11-2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಈಗ ಸುಮಾರು 01 ವರ್ಷದ ಹಿಂದೆ ಧಾರವಾಡದ ಜರ್ಮನ ಆಸ್ಪತ್ರೆಯ ಸರ್ಕಲ ಹತ್ತಿರ ಅಪಘಾತವಾಗಿತ್ತು . ಅಪಘಾತದ ನಂತರ ನಾನು ಸ್ಥಳಕ್ಕೆ ಹೋಗಿದ್ದೆನೆ . ಅಪಘಾತವು ಹೇಗೆ ಮತ್ತು ಯಾರ ತಪ್ಪಿನಿಂದ ಆಗಿದೆ ಎಂದು ಹೇಳಲು ಆಗುವುದಿಲ್ಲ . ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ . ಪೋಲಿಸರಿಗೆ ನಾನು ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ನೀಡಿಲ್ಲ. ಆರೋಪಿಯನ್ನು ಪೊಲೀಸ್ ಠಾಣೆಯಲ್ಲಿ ನೋಡಿ ಗುರುತಿಸಿರುವುದಿಲ್ಲ .

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 20.10.2024 ರಂದು ನಾನು ನನ್ನ **ಮೋಟರ ಸೈಕಲ** ನಂಃ ಕೆಎ-25/ ಇಎಚ್-5587 ನಲ್ಲಿ ಧಾರವಾಡದ ಸಿಟಿ ಕಡೆಗೆ ಹೊಗುತ್ತಿರುವಾಗ ಸಂಪಿಗೆ ನಗರ ಬಸ್ ಸ್ಟಾಪ್ ಹತ್ತಿರ ಒಬ್ಬ ಟ್ರಕ ಚಾಲಕನು ಜರ್ಮನ ಆಸ್ಪತ್ರೆಯ ಸರ್ಕಲ ಕಡೆಯಿಂದ ಕೇಲಗೇರಿ ಕಡೆಗೆ ಅತೀ ವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ತನ್ನ ಮುಂದೆ ಹೊರಟಿದ್ದ ಆಟೋ ರಿಕ್ಷಾಕ್ಕೆ ಡಿಕ್ಕಿ ಹೊಡೆಯಿತು ಎಂದರೆ ಸರಿಯಲ್ಲ .

ಸಿಸಿ ನಂ፧ 170/2025
ಸಿ.ಡಬ್ಲೂ 10/ಪಿ.ಡಬ್ಲೂ 4

ಅಪಪಘಾತದ ಪರಿಣಾಮ ಸದರಿ ಆಟೋ ರಿಕ್ಷಾ ಪಲ್ಟಿಯಾಯಿತು ಕೂಡಲೇ ನಾನು ನನ್ನ ಮೋಟರ ಸೈಕಲನ್ನು ನಿಲ್ಲಿಸಿ ಅಲ್ಲಿ ಸೇರಿದ ಜನರ ಸಹಾಯದೊಂದಿಗೆ ಆಟೋದಲ್ಲಿ ಸಿಲುಕಿರುವ ಪ್ರಯಾಣಿಕರನ್ನು ಹೊರಗೆ ತೆಗೆದೆನು ಎಂದರೆ ಸರಿಯಲ್ಲ . ಅಪಘಾತದ ಪರಿಣಾಮ ಒಬ್ಬ ಹೆಣ್ಣು ಮಗಳಿಗೆ ಎದೆಗೆ , ಕಾಲಿಗೆ ಮತ್ತು ಕೈಗಳಿಗೆ ಪೆಟ್ಟಾಗಿತ್ತು ಎಂದರೆ ಸರಿಯಲ್ಲ . ಸದರಿಯವರ ಹೆಸರನ್ನು ಕೇಳಲಾಗಿ ಅವರ ಹೆಸರು ರೇಣುಕಾ ರವಿ ಹಂಚಿನಮನಿ ಎಂದು ತಿಳಿಸಿದರು ಎಂದರೆ ಸರಿಯಲ್ಲ . ಇನ್ನೊಬ್ಬ ಗಾಯಾಳು ತನ್ನ ಮಗ ಪ್ರಣವ ಅಂತ ತಿಳಿಸಿದ್ದು ಸದರಿಯವನ ಕೈ , ಕಾಲುಗಳಿಗೆ ಬಲವಾದ ಪೆಟ್ಟಾಗಿದ್ದು ಪ್ರಣವ ಇವರ ಬಲಗಾಲು ತುಂಡಾಗಿತ್ತು ಎಂದು ಹೇಳಿದಳು ಎಂದರೆ ಸರಿಯಲ್ಲ . ಅದೇ ರೀತಿ ಮತ್ತೊಬ್ಬ ಗಾಯಾಳು ತನ್ನ ಮಗ ಪೃಥ್ವಿ ಎಂದು ಹೇಳಿದ್ದು ಅವನ ತಲೆಗೆ ಬಲವಾದ ಪೆಟ್ಟಾಗಿದ್ದು ಎಂದು ಹೇಳಿದಳು ಎಂದರೆ ಸರಿಯಲ್ಲ . ಆಟೋ ರಿಕ್ಷಾದಿಂದ ಹೊರಗೆ ಪುಟಿದು ಬಿದ್ದ ವ್ಯಕ್ತಿಯ ತಲೆಯ ಮೇಲೆ ಟ್ರಕ್ ಹಾಯಿಸಿದ್ದು ಆತನು ಸ್ಥಳದಲ್ಲಿಯೇ ಮರಣ ಹೊಂದಿದ್ದು ಅವನ ಹೆಸರು ವಿಳಾಸ ಕೇಳಲಾಗಿ ರಮೇಶ ಹಂಚಿನಮನಿ ಎಂದು ತಿಳಿಸಿದಳು ಎಂದರೆ ಸರಿಯಲ್ಲ . ಅದೇ ರೀತಿ ಮತ್ತೊಬ್ಬ ಹೆಣ್ಣು ಮಗಳ ತಲೆಗೆ ಬಲವಾದ ಪೆಟ್ಟು ಬಿದ್ದು ಮರಣ ಹೊಂದಿದ್ದು ಆಕೆಯ ಹೆಸರು ಮರೆವ್ವ @ ಮರೆಮ್ಮ ಹಂಚಿನಮನಿ ಎಂದು ತಿಳಿಸಿದಳು ಎಂದರೆ ಸರಿಯಲ್ಲ . ಅಪಘಾತಪಡಿಸಿದ ಟ್ರಕ ನಂಬರ ನೋಡಲಾಗಿ ಜಿಎ/06 ಟಿ-9097 ಅಂತ ಇದ್ದು , ಅಲ್ಲಿ ಜನ ಸೇರಿರುವುದನ್ನು ನೋಡಿ ಟ್ರಕ ಚಾಲಕನು ತನ್ನ

ವಾಹನದೊಂದಿಗೆ ಪರಾರಿಯಾದನು ಎಂದರೆ ಸರಿಯಲ್ಲ . ಅಪಘಾತಕ್ಕೆ ಒಳಗಾದ ಆಟೋ ರಿಕ್ಷಾ ನಂದಃ ಕೆಎ-25/ಡಿ-3725 ಅಂತ ಇತ್ತು ಎಂದರೆ ಸರಿಯಲ್ಲ . ನಂತರ ಅಪಘಾತ ಸ್ಥಳಕ್ಕೆ ಅಂಬುಲೆನ್ಸ ಕರೆಯಿಸಿ ಮತ್ತು ಶವಗಳನ್ನು ಹಾಗೂ ಗಾಯಾಳುಗಳನ್ನು ಧಾರವಾಡದ ಸೆವಿಲ್ ಆಸ್ಪತ್ರೆಗೆ ಕಳುಹಿಸಿದೆವು ಎಂದರೆ ಸರಿಯಲ್ಲ . ಅಪಘಾತವು ಬೆಳಗಿನ ಜಾವ 4.40 ಕ್ಕೆ ಆಗಿದೆ ಎಂದರೆ ಸರಿಯಲ್ಲ . ಇನ್ನೊಬ್ಬ ಗಾಯಾಳು ಪ್ರಣವ ಇವರು ಕಿಮ್ಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಮೃತ ಪಟ್ಟ ಬಗ್ಗೆ ತಿಳಿಯಿತು ಎಂದರೆ ಸರಿಯಲ್ಲ . ಈ ಕುರಿತು ನಾನು ಪೊಲಿಸರಿಗೆ ದಿಃ 20.10.2024 ರಂದು ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-26 ಎಂದು ಗುರುತಿಸಲಾಯಿತು .

ನಂತರ ದಿಃ 21.10.2024 ರಂದು ಪೊಲಿಸರು ನನ್ನನ್ನು ಠಾಣೆಗೆ ಕರೆಸಿ ಅಪಘಾತಪಡಿಸಿದ ಟ್ರಕ ಚಾಲಕನನ್ನು ತೊರಿಸಿರುತ್ತಾರೆ ಎಂದರೆ ಸರಿಯಲ್ಲ . ಸದರಿ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು ಆತನ ಹೆಸರು ಉದ್ದಪ್ಪ ವಿಠಲ ಹೊಣಕುಪ್ಪಿ ಎಂದು ಗೊತ್ತಾಯಿತು ಎಂದರೆ ಸರಿಯಲ್ಲ . ಆರೋಪಿಯನ್ನು ನೋಡಿ ಗುರುತಿಸಿದ ಬಗ್ಗೆ ಅದೇ ದಿನ ಈಗ ಓದಿ ಹೇಳಿದಂತೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-27 ಎಂದು ಗುರುತಿಸಲಾಯಿತು .

ನಂತರ ದಿಃ 29.10.2024 ರಂದು ಪೊಲಿಸರು ನನಗೆ ಠಾಣೆಗೆ ಕರೆಸಿ ಅಪಘಾತದಲ್ಲಿ ಗಾಯಗೊಂಡ ಗಾಯಾಳು ಪೃಥ್ವಿ ಹಂಚಿನಮನಿ ಇತ ಮರಣ ಹೊಂದ ಬಗ್ಗೆ ತಿಳಿಸಿದ್ದು ಈ ಕುರಿತು ಅದೇ ದಿನ ಈಗ ಓದಿ ಹೇಳಿದಂತೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ನಿರಾಕರಿಸಿದ ಮರು ಹೇಳಿಕೆಯನ್ನು ನಿಪಿ-28 ಎಂದು ಗುರುತಿಸಲಾಯಿತು . ಪೊಲಿಸರ ಮುಂದೆ ನಿಪಿ-26 ರಿಂದ 28 ರಂತೆ ಹೇಳಿಕೆ ಮತ್ತು ಮರು

ಹೇಳಿಕೆ ನೀಡಿದ್ದರೂ ಸಹ ಆರೋಪಿಗೆ ಸಹಾಯು ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಪಿ ಎಂ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀಸವಾಲು ಏನು ಇಲ್ಲ ಎಂದು ತಿಳಿಸಿರುತ್ತಾರೆ .

**ಮರುವಿಚಾರಣೆ ಂಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.